**ಪ್ರ.ದ.ನ್ಯಾ.ದಂ.ಗಳವರ ನ್ಯಾಯಾಲಯದಲ್ಲಿ, ಸಿರುಗುಪ್ಪ**

**ಸಿ.ಸಿ.ನಂ.660/2020**

ಫಿರ್ಯಾದಿದಾರರು : ರಾಜ್ಯ ಪರವಾಗಿಃ ಅರಕ್ಷಕ ಉಪನಿರೀಕ್ಷಕರು,
ಅಬಕಾರಿ ಪೋಲಿಸ್ ಠಾಣೆ, ಸಿರುಗುಪ್ಪ ವಲಯ

ವಿರುದ್ಧ

ಆರೋಪಿತರು : ಬಿ.ಸತ್ಯಪ್ಪ ಬಿನ್ ಗಾದಿಲಿಂಗಪ್ಪ,
ವಃ 32 ವರ್ಷ, ವಾಸಃ 30 ನೇ ವಾರ್ಡ್,
ಸಿಂಧನೂರು ಬೈಪಾಸ್ ಹತ್ತಿರ, ಸಿರುಗುಪ್ಪ ಟೌಃ
ಬಳ್ಳಾರಿ ಜಿಲ್ಲೆ.

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿಯ ಹೇಳಿಕೆ**

ಪ್ರಶ್ನೆಃ*1)* ಈ ಪ್ರಕರಣದಲ್ಲಿ ನೀವು ಅಭಿಯೋಜನ ಪರ ಸಾಕ್ಷಿದಾರರ ನುಡಿದ ಸಾಕ್ಷಿಯನ್ನು ಕೇಳಿರುವೀರಾ ಹೇಗೆ?

ಉತ್ತರಃ

ಪ್ರಶ್ನೆಃ2) ಪಿ.ಡಬ್ಲ್ಯೂ-1/ಶಂಕರ್ ಮಹದೇವ್ ಗುಡದಾರ್, ಅಬಕಾರಿ ನಿರೀಕ್ಷಕರು, ಇವರು ತಮ್ಮ ಸಾಕ್ಷ್ಯದಲ್ಲಿ ಜಿಲ್ಲಾಧಿಕಾರಿಗಳು ಬಳ್ಳಾರಿ ಜಿಲ್ಲೆ ಬಳ್ಳಾರಿರವರು ಕೋವಿಡ್ *19* ಮಾರಕ ಕಾಯಿಲೆ ಹರಡುವ ನಿಮಿತ್ತ ಬಳ್ಳಾರಿ ಜಿಲ್ಲಾದ್ಯಂತ ಮದ್ಯದ ಅಂಗಡಿಗಳನ್ನು ಬಂದ್ ಮಾಡುವಂತೆ ಅದೇಶಿಸಿದ ಪ್ರಯುಕ್ತ ದಿನಾಂಕ *29.03.2020* ರಂದು ತಾನು ಮತ್ತು ಸಿಬ್ಬಂದಿಯಾದ ಚಾಸಾ *4* ರವರೊಂದಿಗೆ ಅಬಕಾರಿ ಅಕ್ರಮಗಳನ್ನು ಪತ್ತೆ ಹಚ್ಚುವ ಸಲುವಾಗಿ ಮದ್ಯಾಹ್ನ *1-00* ಗಂಟೆಗೆ ಕಚೇರಿಗೆ ಹೋರಟು ನಗರದಲ್ಲಿ ಗಸ್ತು ಮಾಡುತ್ತಿರುವಾಗ ಸಿರುಗುಪ್ಪ ನಗರದ ಬಿ.ಸತ್ಯಪ್ಪ ತಂದೆ ಗಾದಿಲಿಂಗಪ್ಪ ಇವರ ವಾಣಿಜ್ಯ ಮಳಿಗೆಯಲ್ಲಿ ಅಕ್ರಮವಾಗಿ ಮದ್ಯವನ್ನು ಸಂಗ್ರಹಿಸಿರುವ ಬಗ್ಗೆ ಮದ್ಯಾಹ್ನ *01-10* ಗಂಟೆ ಖಚಿತ ಮಾಹಿತಿ ಬಂದ ಮೇರೆಗೆ ತಾವು ಸಿಂದನೂರು ನಗರಕ್ಕೆ ಹೋಗುವ ಬೈಪಾಸ್ ರಸ್ತೆಯ ಹತ್ತಿರ ಇರುವ ಪ್ರಸನ್ನ ಮಂದಿರದ ಹತ್ತಿರ ನಿಂತಿರುವ ಇಬ್ಬರು ವ್ಯಕ್ತಿಗಳನ್ನು ತಡೆದು ಬಾತ್ಮಿ ವಿಷಯವನ್ನು ತಿಳಿಸಿ ಸದರಿ ವಾಣಿಜ್ಯ ಮಳಿಗೆ ಮೇಲೆ ದಾಳಿ ಮಾಡುವುದಿದ್ದು ಆ ಸಮಯದಲ್ಲಿ ಯಾವುದಾದರು ಅಬಕಾರಿ

ಅಕ್ರಮಗಳು ಕಂಡುಬಂದು ತಾವು ಪಂಚರಾಗಿ ಇದ್ದುಕೊಂಡು ಪಂಚನಾಮೆ ಕ್ರಮ ನಡೆಸಿಕೊಡಬೇಕೆಂದು ಕೇಳಿಕೊಂಡ ಮೇರೆಗೆ ಸದರಿಯವರು ಪಂಚರಾಗಲು ಒಪ್ಪಿಕೊಂಡಿರುತ್ತಾರೆ ಎಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆಃ3) ಸದರಿ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಸಿಬ್ಬಂದಿ ಹಾಗೂ ಪಂಚರೊಂದಿಗೆ ಮದ್ಯಾಹ್ನ 01-30 ಗಂಟೆಗೆ ಸದರಿ ವಾಣಿಜ್ಯ ಮಳಿಗೆ ಮೇಲೆ ಅಬಕಾರಿ ದಾಳಿ ಮಾಡಿ ಶೋದನೆ ಮಾಡುವ ಪೂರ್ವದಲ್ಲಿ ನ್ಯಾಯಾಲಯದಿಂದ ಶೋದನ ವಾರೆಂಟ್ ಪಡೆಯಲು ಕಾಲವಕಾಶ ಇಲ್ಲದ ಪ್ರಯುಕ್ತ ಸ್ಥಳದಲ್ಲಿಯೆ ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 54 ರಡಿಯಲ್ಲಿ ಶೋದನ ವರದಿಯನ್ನು ಬರೆದುಕೊಂಡು ಸದರಿ ವಾಣಿಜ್ಯ ಮಳಿಗೆಯನ್ನು ಶೋದನೆ ಮಾಡಲಾಗಿ ವಾಣಿಜ್ಯ ಮಳಿಗೆಯಲ್ಲಿ ಓರಿಜಿನಲ್ ಚಾಯ್ಸ್ ವಿಸ್ಕಿ 192 ಟೆಟ್ರಾ ಪ್ಯಾಕೆಟ್ ಗಳಲ್ಲಿ 17.280 ಲೀಟರ್ ಮದ್ಯ, ಐ ಓಟ್ ್ಸ ಚಿಯರ್ಸ್ ವಿಸ್ಕಿ 90 ಮಿಲಿಯ 192 ಟೆಟ್ರಾ ಪ್ಯಾಕೆಟ್ ಗಳಲ್ಲಿ ಒಟ್ಟು 17.280 ಲೀಟರ್ ಮದ್ಯ, 8 ಪಿಎಮ್ ವಿಸ್ಕಿ 40 ಟೆಟ್ರಾ ಪ್ಯಾಕೆಟ್ ಗಳಲ್ಲಿ 8.640 ಲೀಟರ್ ಮದ್ಯ, 8 ಪಿಎಮ್ ವಿಸ್ಕಿ 90 ಮಿಲಿಯ 160 ಮದ್ಯದ ಟೆಟ್ರಾ ಪ್ಯಾಕೆಟ್ ಗಳಲ್ಲಿ 14.400 ಲೀಟರ್ ಮದ್ಯ, ಮತ್ತು ಕಿಂಗ್ ಫಿಶರ್ ಸ್ಟ್ರಾಂಗ್ ಪ್ರಿಮಿಯರ್ 330 ಮಿಲಿಯ 34 ಟಿನ್ ಗಳಲ್ಲಿ ಒಟ್ಟು 11.220 ಲೀಟರ್ ಬೀಯರ್ ಇರುವುದು ಕಂಡುಬಂದಿದ್ದು ವಾಣಿಜ್ಯ ಮಳಿಗೆಯಲ್ಲಿ ಇದ್ದ ಆರೋಪಿಯ ಹೆಸರು ವಿಚಾರಿಸಲಾಗಿ ಬಿ ಸತ್ಯಪ್ಪ ತಂದೆ ಗಾದಿಲಿಂಗಪ್ಪ ಎಂದು ತಿಳಿಸಿದರು ಎಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ4) ಸದರಿ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಸದರಿ ಮದ್ಯದ ಬಗ್ಗೆ ಆರೋಪಿಗೆ ವಿಚಾರಿಸಲಾಗಿ ಆರೋಪಿಯು ಯಾವುದೇ ಉತ್ತರ ನೀಡಿರುವುದಿಲ್ಲ. ನಂತರ ದೊರೆತ ಮುದ್ದೆ ಮಾಲಿನಿಂದ ಕ್ರಮ ಸಂಖ್ಯೆ *1* ಮತ್ತು *2* ರಿಂದ ತಲಾ *60* ರಂತೆ *120* ಮದ್ಯದ ಟಟ್ರಾ ಪ್ಯಾಕೆಟಗಳನ್ನು ಕ್ರಮ ಸಂಖ್ಯೆ *3* ರಿಂದ *15* ಟೆಟ್ರಾ ಪ್ಯಾಕೆಟಳನ್ನು, ಕ್ರಮ ಸಂಖ್ಯೆ*4* ರಿಂದ *50* ಟೆಟ್ರಾ ಪ್ಯಾಕೆಟಳನ್ನು, ಕ್ರಮ ಸಂಖ್ಯೆ*5* ರಿಂದ

*14* ಟಿನ್ ಗಳನ್ನು ರಾಸಯನಿಕ ಪರೀಕ್ಷೆಗೆ ತೆಗೆದು ಒಂದು ಚೀಲದಲ್ಲಿ ಹಾಕಿ ದಾರದಿಂದ ಕಟ್ಟಿ ಹರಗು ಹಾಕಿ ಕಚೇರಿ ಸೀಲ್ ನಂಬರ್ *472* ರಿಂದ ಮೊಹರು ಮಾಡಲಾಯಿತು, ನಂತರ ಮಾದರಿ ಸೀಲ್ ನಮೂನೆ ಹಾಗೂ ಗುರುತಿನ ಚೀಟಿ ಪಡೆದು ಗುರುತಿನ ಚೀಟಿಗಳನ್ನು ರಾಸಾಯನಿಕ ಮುದ್ದೆ ಮಾಲುಗಳಿಗೆ ಅಂಟಿಲಸಾಯಿತು. ಕೋವಿಡ್ *19* ನಿಮಿತ್ತ ಮಾನ್ಯ ಜಿಲ್ಲಾಧಿಕಾರಿಗಳು ಅದೇಶ ಜಾರಿಯಲ್ಲಿದ್ದರು ಕೂಡ ಆರೋಪಿಯು ಯಾವುದೇ ಪರವಾನಿಗೆ ಇಲ್ಲದೆ ಅಕ್ರಮವಾಗಿ ತನ್ನ ಸ್ವಾಧೀನದಲ್ಲಿ ಇರುವ ವಾಣಿಜ್ಯ ಮಳಿಗೆಯಲ್ಲಿ ಸಂಗ್ರಹಿಸಿರುವುದು ಕರ್ನಾಟಕ ಅಬಕಾರಿ ಕಾಯ್ದೆ ಅಡಿ ಅಪರಾದ ಆಗಿರುವುದರಿಂದ ಆರೋಪಿಯನ್ನು ಸ್ಥಳದಲ್ಲಿಯೆ ದಸ್ತಗಿರಿ ಮಾಡಲಾಯಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ*?*

ಉತ್ತರಃ

ಪ್ರಶ್ನೆ5) ಸದರಿ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರವಿವಾರದ ಪಂಚನಾಮೆ ಅಡಿ ಮುದ್ದೆ ಮಾಲನ್ನು ಜಪ್ತುಪಡಿಸಿಕೊಂಡು ಸದರಿ ಸ್ಥಳದಲ್ಲಿಯೆ ಮದ್ಯಾಹ್ನ 1.30 ರಿಂದ 2-30 ರವರಗೆ ಬರೆದು ಮುಗಿಸಲಾಯಿತು. ನಂತರ ಮುದ್ದೆ ಮಾಲು ಮತ್ತು ಆರೋಪಿಯೊಂದಿಗೆ ಕಚೇರಿಗೆ ಹಿಂತಿರುಗಿ ಆರೋಪಿಯನ್ನು ವೈದ್ಯಕೀಯ ತಪಸಣೆಗೆ ಒಳಪಡಿಸಿ ಆರೋಪಿಯು ನೀಡಿದ ಹೇಳಿಕೆಯ ಮೇರೆಗೆ ಪ್ರಥಮ ವರ್ತಮಾನ ವರದಿ ಮತ್ತು ಪಿರ್ಯಾದಿಯನ್ನು ದಾಖಲಿಸಿ ಸಂಬಂದಪಟ್ಟ ದಾಖಲಾತಿಗಳೊಂದಿಗೆ ಆರೋಪಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿಲಾಯಿತು, ನಂತರ ದಿನಾಂಕ 15-05-2020 ರಂದು ಪ್ರಕರಣದ ಮುಂದಿನ ತನಿಖೆಗಾಗಿ ಚಾಸಾ 7 ರವರಿಗೆ ಪ್ರಕರಣವನ್ನು ಹಸ್ತಂತರಿಸಲಾಯಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ*?*

ಉತ್ತರಃ

ಪ್ರಶ್ನೆಃ6) ಫ್ರಾಸಾ.2/ಫಿರೋಜ್ ಜಾಫರ್, ಅಬಕಾರಿ ಮುಖ್ಯ ಪೇದೆ ಇವರು ತಮ್ಮ ಸಾಕ್ಷ್ಯದಲ್ಲಿ

ದಿನಾಂಕ 29.03.2020 ರಂದು ತಾನು ಕಛೇರಿಯಲ್ಲಿ ಇದ್ದಾಗ ಚಾಸಾ 1 ರವರು ಕರೆದು ಕೋವಿಡ್ 2019 ಲಾಕ ಡೌನ್ ಜಾರಿ ಇದ್ದು ಎಲ್ಲಾ ಮದ್ಯದ ಅಂಗಡಿಗಳನ್ನು ಮುಚ್ಚುವಂತೆ ಆದೇಶ ಇದ್ದು ಆ ನಿಟ್ಟಿನಲ್ಲಿ ಗಸ್ತು ಕಾರ್ಯ ಮಾಡುವುದು ಇದೆ ಎಂದು ಹೇಳಿದರು, ತಾನು, ಚಾಸಾ.1 ಮತ್ತು ವಾಹನ ಚಾಲಕ ಸರ್ಕಾರಿ ವಾಹನದಲ್ಲಿ ಗಸ್ತು ಕರ್ತವ್ಯ ಮಾಡುತ್ತಿದ್ದಾಗ ಮದ್ಯಾಹ್ನ 01.00 ಗಂಟೆಗೆ ಚಾಸಾ 1 ರವರಿಗೆ ಸಿರುಗುಪ್ಪ ನಗರದ 30 ನೇ ವಾರ್ಡ ನ ವಾಣಿಜ್ಯ ಮಳಿಗೆವೊಂದರಲ್ಲಿ ಅಕ್ರಮವಾಗಿ ಮದ್ಯವನ್ನು ಮಾರಾಟ ಮಾಡಲು ದಾಸ್ತಾನು ಮಾಡಿರುವುದಾಗಿ ಮಾಹಿತಿ ಬಂದಿತ್ತು, ತಾವು ಚರ್ಚ ಬಳಿ ನಿಂತಿದ್ದ ಚಾಸಾ 2 ಮತ್ತು 3 ರವರನ್ನು ಪಂಚರಾಗಿ ನೇಮಿಸಿಕೊಂಡು ಕೃತ್ಯ ಸ್ಥಳಕ್ಕೆ ಹೋದೆವು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆಃ7) ಸದರಿ ಸಾಕ್ಷಿಯು ಮುಂದುವರೆದು ಇವರು ತಮ್ಮ ಸಾಕ್ಷ್ಯದಲ್ಲಿ ನಂತರ ಚಾಸಾ 1 ರವರು ಶೋದನ ಸಮುಚ್ಚಿತ ವಾರೆಂಟ್ ನ್ನು ತಯಾರಿಸಿ ಮಳಿಗೆಯನ್ನು ಶೋದನೆ ಮಾಡಿದಾಗ ಅಲ್ಲಿ 90 ಎಂ ಎಲ್ ನ ಒರಿಜನಲ್ ವಿಸ್ಕಿ ಯ 192 ಪೌಚಗಳು ಎರಡು ಪೆಟ್ಟಗೆಯಲ್ಲಿ ಇದ್ದವು, 90 ಎಂ ಎಲ್ ನ ಹೈವರ್ಡ್ಸ ವಿಸ್ಕಿಯ 192 ಟೇಟ್ರ ಪ್ಯಾಕೇಟ್‌ಗಳು ಎರಡು ಪೆಟ್ಟಗೆಯಲ್ಲಿ ಇದ್ದವು. 180 ಎಂ ಎಲ್ ನ 8 ಪಿ ಎಂ ವಿಸ್ಕಿಯ 48 ಟೇಟ್ರ ಪ್ಯಾಕೇಟ್‌ಗಳು ಒಂದು ಪೆಟ್ಟಗೆಯಲ್ಲಿ ಇದ್ದವು, 90 ಎಂ ಎಲ್ ನ 8 ಪಿ ಎಂ ವಿಸ್ಕಿಯ 160 ಟೇಟ್ರ ಪ್ಯಾಕೇಟ್‌ಗಳು ಇದ್ದವು, 330 ಎಂ ಎಲ್ ನ ಕಿಂಗ್ ಪಿಷರ್ 34 ಟಿನ್ ಗಳು ಇದ್ದವು, ಒಟ್ಟು ಮದ್ಯ 57.600 ಲೀ ಮತ್ತು 11.200 ಲೀ ಬಿರ್ ಇದ್ದವು, ಸದರಿ ಮಳಿಗೆ ನಡೆಸುತ್ತಿದ್ದ ವ್ಯಕ್ತಿಯ ಹೆಸರು ಬಿ ಸತ್ಯಪ್ಪ ಎಂದು ತಿಳಿಸಿ, ತನ್ನ ಬಳಿ ಯಾವುದೇ ಪರವಾನಿಗೆ ಇಲ್ಲ ಎಂದು ತಿಳಿಸಿದನು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆಃ8) ಸದರಿ ಸಾಕ್ಷಿಯು ಮುಂದುವರೆದು ಇವರು ತಮ್ಮ ಸಾಕ್ಷ್ಯದಲ್ಲಿ ನಂತರ ಚಾಸಾ.1 ರವರು ರಾಸಾಯನಿಕ ಪರೀಕ್ಷೆಗಾಗಿ ಜಪ್ತದ ಮುದ್ದೆ ಮಾಲಿನಿಂದ 90 ಎಂ ಎಲ್ ನ ಒರಿಜನಲ್ ವಿಸ್ಕಿ ಯ 60 ಪೌಚಗಳು, 90 ಎಂ ಎಲ್ ನ ಹೈವರ್ಡ್ಸ ವಿಸ್ಕಿಯ 60

ಟೇಟ್ರ ಪ್ಯಾಕೇಟ್‌ಗಳು, 180 ಎಂ ಎಲ್ ನ 8 ಪಿ ಎಂ ವಿಸ್ಕಿಯ 14 ಟೇಟ್ರ ಪ್ಯಾಕೇಟ್‌ಗಳು, 90 ಎಂ ಎಲ್ ನ 8 ಪಿ ಎಂ ವಿಸ್ಕಿಯ 50 ಟೇಟ್ರ ಪ್ಯಾಕೇಟ್‌ಗಳು, 330 ಎಂ ಎಲ್ ನ ಕಿಂಗ್ ಪಿಷರ್ 14 ಟಿನ್ ಗಳನ್ನು ಒಂದು ರಟ್ಟಿನ ಪ್ಯಾಕೇಟ ನಲ್ಲಿ ಹಾಕಿ ಚೀಲದಲ್ಲಿ ಹಾಕಿ ಚೀಲದ ಬಾಯಿಗೆ ದಾರ ಸುತ್ತಿ ಸೀಲ್ ಮಾಡಿ ಮಾದರಿ ಸೀಲ್ ಮತ್ತು ಸಹಿ ಪಡೆದರು. ಸ್ಥಳದಲ್ಲಿ ಮದ್ಯಾಹ್ನ 1.30 ರಿಂದ 2.30 ರವರೆಗೆ ಪಂಚನಾಮೆ ಮಾಡಿದರು, ಪಂಚನಾಮೆಯಲ್ಲಿ ತಾನು ಸಹಿ ಮಾಡಿದ್ದೇನೆ, ಈ ಬಗ್ಗೆ ತನಿಖಾಧಿಕಾರಿಗೆ ಹೇಳಿಕೆ ನೀಡಿದ್ದೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆಃ9) ಫ್ರಾಸಾ.3/ಮೌನೇಶ, ಅಬಕಾರಿ ನಿರೀಕ್ಷಕರು, ಇವರು ತಮ್ಮ ಸಾಕ್ಷ್ಯದಲ್ಲಿ ಪ್ರಕರಣದ ಮುಂದಿನ ತನಿಖೆಯನ್ನು ವಹಿಸಿಕೊಂಡು ಚಾಸಾ.2, 3 ಮತ್ತು 5 ರವರ ಹೇಳಿಕೆ ಪಡೆದೆನು, ದಿನಾಂಕ 28.05.2020 ರಂದು ಜಪ್ತಾದ ಮುದ್ದೆ ಮಾಲನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸಿಕೊಟ್ಟೆನು, ವರದಿಯನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಕೊಂಡೆನು, ಚಾಸಾ.5 ರವರ ಮರು ಹೇಳಿಕೆ ಪಡೆದೆನು, ನಗರಸಭೆ ಸಿರುಗುಪ್ಪ ಕಛೇರಿಗೆ ಆರೋಪಿಯ ಸ್ವತ್ತಿನ ಮಾಲೀಕತ್ವದ ವಿವರ ಕೋರಿ ಪತ್ರ ಬರೆದು ನಮೂನೆ 3 ದಾಖಲೆಯನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡೆನು, ಚಾಸಾ.6 ರವರ ಹೇಳಿಕೆ ಪಡೆದೆನು, ದಿನಾಂಕ 08.06.2020 ರಂದು ಉಳಿದ ಮುದ್ದೆ ಮಾಲನ್ನು ಸಕ್ಷಮ ಫ್ರಾಧಿಕಾರಕ್ಕೆ ಹಸ್ತಾಂತರ ಮಾಡಿದೆನು, ನಂತರ ಕಡತವನ್ನು ಚಾಸಾ.1 ರವರಿಗೆ ಹಸ್ತಾಂತರ ಮಾಡಿದೆನು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನ 10) ನಿಮ್ಮ ಪರವಾಗಿ ಬೇರೆ ಏನಾದರೂ ಹೇಳುವುದು ಇದೆಯಾ?

ಉತ್ತರಃ

**ಪ್ರಶ್ನೆ11) ನಿಮ್ಮ ಪರವಾಗಿ ಯಾವುದಾದರೂ ಸಾಕ್ಷಿ ಇದೆಯೆ?**

**ಉತ್ತರಃ**

ಮೇಲಿನ ಆರೋಪಿ ಹೇಳಿಕೆಯನ್ನು ಅವರ ಸಮಕ್ಷಮ ಓದಿ ಹೇಳಿ ಅವರು ನೀಡಿದ ಉತ್ತರವನ್ನು ದಾಖಲಿಸಿಕೊಳ್ಳಲಾಯಿತು. ಅದು ನಿಜ ಮತ್ತು ಸರಿಯಾಗಿದೆ ಎಂಬುದಾಗಿ ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕಃ ***01.07.2026***

***ಪ್ರಂದಂನ್ಯಾಂದಂಂಗಳು,ಸಿರುಗುಪ್ಪಂ***